**Indian Streams Research Journal**
**Vol -2 , ISSUE –9, October - 2012**
**ISSN:-** 2230-7850 Available online at www.lbp.world

# ಚಂದ್ರನಖಿ – ಸೂರ್ಪನಖಿ

**ಡಾ. ಶಂಕರ ಭಟ್ ಪಿ**
ಕನ್ನಡ ಸಹ ಪ್ರಾಧ್ಯಾಪಕರು ಸರಕಾರಿ ಪ್ರಥಮ ದರ್ಜೆ ಕಾಲೇಜು ವಿಟ್ಲ, ದ.ಕ. ಜಿಲ್ಲೆ.

'ವಾಲ್ಮೀಕಿ ರಾಮಾಯಣ'ದಲ್ಲಿ ಶೂರ್ಪನಖಿಯು ನಿಜರೂಪದಿಂದ ಬಂದು ರಾಮನನ್ನು ಬಯಸುತ್ತಾಳೆ. ರಾಮನು ಅವಳನ್ನು ಲಕ್ಷ್ಮಣನಲ್ಲಿಗೂ, ಲಕ್ಷ್ಮಣನು ರಾಮನಲ್ಲಿಗೂ ಕಳುಹಿಸಿ ಅಪಹಾಸ್ಯ ಮಾಡುತ್ತಾರೆ. ಆಗ ಸೀತೆಯನ್ನು ಭಕ್ಷಿಸಿದರೆ ರಾಮನು ತನ್ನನ್ನು ಮದುವೆಯಾದಾನೆಂದು ಶೂರ್ಪನಖಿಯು ಸೀತೆಯ ಕಡೆಗೆ ನುಗ್ಗಿದಾಗ, ರಾಮನು ಸಿಟ್ಟಿನಿಂದ ಅವಳನ್ನು ವಿರೂಪಗೊಳಿಸಲು ಲಕ್ಷ್ಮಣನಲ್ಲಿ ಹೇಳುತ್ತಾನೆ.

'ಶ್ರೀ ರಾಮಾಯಣ ದರ್ಶನಂ' ಕಾವ್ಯದಲ್ಲಿ ಚಂದ್ರನಖಿಯು ಸುಂದರ ರೂಪದಿಂದ ರಾಮನಿರುವಲ್ಲಿಗೆ ಬಂದು ರಾಮನನ್ನು ಬಯಸುತ್ತಾಳೆ. ಜೈನ ರಾಮಾಯಣಗಳಲ್ಲಿ ಶೂರ್ಪನಖಿಯ ಹೆಸರನ್ನು ಚಂದ್ರನಖಿ ಎಂದು ಬದಲಾಯಿಸಿದ್ದಾರೆ. ನಾಗಚಂದ್ರನು 'ರಾಮಚಂದ್ರ ಚರಿತ ಪುರಾಣ'ದಲ್ಲಿ ಚಂದ್ರನಖಿ ಎಂಬ ಹೆಸರನ್ನು ಬಳಸಿದ್ದಾನೆ. ಕುವೆಂಪು ಅವರ ಮೇಲೆ ಜೈನ ಕಾವ್ಯಗಳು ಬೀರಿದ ಪ್ರಭಾವ ಇಲ್ಲಿ ಕಂಡು ಬರುತ್ತದೆ. 'ತೊರವೆ ರಾಮಾಯಣ'ದಲ್ಲಿ ಶೂರ್ಪನಖಿ ಸುಂದರ ರೂಪದಿಂದ ಬರುತ್ತಾಳೆ. ಅದರ ಪ್ರಭಾವವನ್ನು ಇಲ್ಲಿ ಗುರುತಿಸಬಹುದು. ರಾಮನು ತನಗೆ ಮಡದಿ ಇದ್ದಾಳೆಂದರೂ ಆ ಮಾತು ಕೇಳದೆ ವಾದ ಮಾಡುತ್ತಾಳೆ. ಆಗ ರಾಮನು ಅವಳಲ್ಲಿ ಲಕ್ಷ್ಮಣನು ಬರುವ ಮೊದಲು ಹೋಗೆಂದು ಹೇಳುತ್ತಾನೆ. ಅಷ್ಟರಲ್ಲಿ ಲಕ್ಷ್ಮಣನು ಬಂದದ್ದು ನೋಡಿ ಚಂದ್ರನಖಿ ಮೋಹದಿಂದಲೇ ಇರುತ್ತಾಳೆ. ರಾಮನಿಂದ ಅವಳ ವಿಚಾರವನ್ನು ತಿಳಿದ ಲಕ್ಷ್ಮಣನು ಚಂದ್ರನಖಿಯನ್ನು ದೂರ ತೊಲಗೆಂದು ತೋಳು ಬೀಸುತ್ತಾನೆ. ಆಗ ಅವನ ಕೈಯಲ್ಲಿದ್ದ ಬಾಣವು ಪ್ರಮಾದದಿಂದ ಅವಳ ಮುಖಕ್ಕೆತಾಗಿ ರಕ್ತ ಹರಿಯುತ್ತದೆ. ಕೂಡಲೇ ಚಂದ್ರನಖಿಯು ನಿಜ ರೂಪ ತಾಳುತ್ತಾಳೆ. ಚಂದ್ರನಖಿ ಎಂಬ ಹೆಸರಿನಲ್ಲಿ ಜೈನ ಕಾವ್ಯಗಳ ಪ್ರಭಾವವಿದ್ದರೂ ಕಾವ್ಯ ರಚನೆಯಲ್ಲಿ ಹೊಸತನ ಕಂಡುಬರುತ್ತದೆ. ಚಂದ್ರನಖಿಯನ್ನು ಅಪಹಾಸ್ಯ ಮಾಡುವ ಭಾಗ ಇಲ್ಲದಿರುವುದು ಸೂಕ್ತವಾಗಿದೆ.

ಮಂದಾರ ರಾಮಾಯಣ ದಲ್ಲಿ ಸೂರ್ಪನಖಿಯು ರಾಮ ಲಕ್ಷ್ಮಣರ ವಿಚಾರವನ್ನು ಮಾರೀಚನಿಂದ ತಿಳಿದು, ಲಕ್ಷ್ಮಣನಿರುವಲ್ಲಿಗೆ ಹೋಗಿ ಪ್ರೇಮ ಭಿಕ್ಷೆ ಕೇಳುತ್ತಾಳೆ. ಲಕ್ಷ್ಮಣನು ಅವಳನ್ನು ತಿರಸ್ಕರಿಸಿದಾಗ, ಸೂರ್ಪನಖಿಯು ಅವನನ್ನು ಹಿಡಿಯಲು ಹೋಗುತ್ತಾಳೆ. ಆಗ ಲಕ್ಷ್ಮಣನು ಸಿಟ್ಟಿನಿಂದ ಅವಳ ಕಿವಿ, ಮೂಗುಗಳನ್ನು ಕತ್ತರಿಸಿ ಆಶ್ರಮಕ್ಕೆ ಬರುತ್ತಾನೆ. ರಕ್ತದಿಂದ ಕೂಡಿದ ಲಕ್ಷ್ಮಣನನ್ನು ಕಂಡು ರಾಮ, ಸೀತೆ ಹೆದರಿಕೊಳ್ಳುತ್ತಾರೆ. ಲಕ್ಷ್ಮಣನು ನಡೆದ ವಿಚಾರವನ್ನು ತಿಳಿಸುತ್ತಾನೆ. 'ವಾಲ್ಮೀಕಿ ರಾಮಾಯಣ'ಕ್ಕಿಂತ 'ಶ್ರೀ ರಾಮಾಯಣ ದರ್ಶನಂ' ಮತ್ತು ಮಂದಾರ ರಾಮಾಯಣ ಗಳ ಈ ಭಾಗ ಉತ್ತಮವಾಗಿದೆ. ಪತ್ನಿ ಇರುವ ರಾಮನಲ್ಲಿ ಸಂಗಾತಿಯನ್ನು ಬಯಸುವ ಚಂದ್ರನಖಿಯಲ್ಲಿ ಮತ್ತು ನಿಜರೂಪದಿಂದ ಬಂದು ಏಕಾಂಗಿಯಾದ ಲಕ್ಷ್ಮಣನಲ್ಲಿ ಪ್ರೇಮ ಭಿಕ್ಷೆ ಯಾಚಿಸುವ ಸೂರ್ಪನಖಿಯಲ್ಲಿಯೂ ರಾಕ್ಷಸ ಸ್ವಭಾವ ವ್ಯಕ್ತವಾಗಿದೆ.

ವಾಲ್ಮೀಕಿ ರಾಮಾಯಣ'ದಲ್ಲಿ ಶೂರ್ಪನಖಿಯು ರಾವಣನಿಗೆ ಸೀತೆಯನ್ನು ಅಪಹರಿಸಲು ಪ್ರೇರಣೆ ನೀಡಿ, ಮುಂದೆ ನಡೆದ ದುರಂತದ ಸಮಯದಲ್ಲಿ ಕಾಣಿಸುವುದಿಲ್ಲ. ಮೂಲ ರಾಮಾಯಣದಲ್ಲಿ ಶೂರ್ಪನಖಿ ದುಷ್ಟಪಾತ್ರ, 'ಶ್ರೀ ರಾಮಾಯಣ ದರ್ಶನಂ' ಕಾವ್ಯದಲ್ಲಿ ಶೂರ್ಪನಖಿ ಎಂಬ ಹೆಸರಿನ

ಬದಲಾಗಿ ಚಂದ್ರನಖಿ ಎಂದು ಬಳಸಿದ್ದಾರೆ. 'ಪಾಪಿಗುದ್ಧಾರಮಿಹುದೌ ಸೃಷ್ಟಿಯಮಹದ್‌ವ್ಯೂಹ ರಚನೆಯೊಳ್ ಎಂಬ ದರ್ಶನಧ್ವನಿಯನ್ನು, ಕುವೆಂಪು ಅವರು ಪಾತ್ರಗಳನ್ನು ಉದಾತ್ತಗೊಳಿಸುವುದಕ್ಕಾಗಿ ಬಳಸಿದ್ದಾರೆ. ದುಷ್ಟಪಾತ್ರವಾದ ಶೂರ್ಪನಖಿಯನ್ನು ಅದಕ್ಕಾಗಿಯೇ ಚಂದ್ರನಖಿಯಾಗಿ ಚಿತ್ರಿಸಿದ್ದಾರೆ.

'ಶ್ರೀ ರಾಮಾಯಣ ದರ್ಶನಂ' ಕಾವ್ಯದ ಚಂದ್ರನಖಿಯಲ್ಲಿ ಮಾನಸಿಕ ಪರಿವರ್ತನೆ, ಮಾನವೀಯ ಗುಣದ ಔನ್ನತ್ಯ, ಪಶ್ಚಾತ್ತಾಪ ಬುದ್ಧಿ ಅನ್ಯಾದೃಶವಾಗಿದೆ. ರಾವಣನ ರಾಮತ್ವವನ್ನು ಜಾಗೃತಗೊಳಿಸಿದ್ದಾಳೆ. ಸೀತೆಯನ್ನು ರಕ್ಷಿಸಿ ರಾವಣನನ್ನು ದುರಂತದಿಂದ ತಪ್ಪಿಸುವ ಪ್ರಯತ್ನ ನಡೆಸಿದ್ದಾಳೆ. ಆದರೆ ಚಂದ್ರನಖಿಯ ಮಾನಸಿಕ ಪರಿವರ್ತನೆಯ ಸಂದರ್ಭ ಕಾವ್ಯದಲ್ಲಿ ಇಲ್ಲ. ಚಂದ್ರನಖಿಯು ತನ್ನ ಸ್ವಾರ್ಥಕ್ಕಾಗಿ ರಾವಣನಲ್ಲಿ ಸೀತೆಯನ್ನು ಕದ್ದು ತರಲು ತಿಳಿಸುತ್ತಾಳೆ. ರಾವಣನು ಸೀತೆಯನ್ನು ಕದ್ದು ತಂದ ಬಳಿಕ ಚಂದ್ರನಖಿಯನ್ನು ಕರೆಸಿ ನಡೆದುದನ್ನು ವಿವರಿಸುತ್ತಾಳೆ. ಆಗ ಚಂದ್ರನಖಿಯು ಅಣ್ಣನ ಬೇಟೆ ಸಂದುದನ್ನು ಕಂಡು, ತನ್ನ ಮನಸ್ಸಿನಲ್ಲಿ ಮಿಂಚುತ್ತಿದ್ದ ನೂರಾರು ಭಾವಗಳನ್ನೂ, ಬಯಕೆಗಳನ್ನೂ ಹುದುಗಿಸಿ ರಾವಣನನ್ನು ಕುರಿತು_ "ಅಣ್ಣ ನಿನ್ನಿಷ್ಟದವಳನ್ನು ತಂದುದಾಯಿತು. ಇವಳು ನಿನ್ನನ್ನು ಒಲಿಯುವಂತೆ ತಿದ್ದುವ ಜಾಣ್ಮೆನನಗಿರಲಿ, ಹೆಣ್ಣಿನ ಬಗೆ ಹೆಣ್ಣಿಗೆ ತಾನೆ ಅರಿಯುವುದು" ಎನ್ನುತ್ತಾಳೆ. ಈ ಹಿಂದೆ ಚಂದ್ರನಖಿಯಲ್ಲಿದ್ದ ಸ್ವಾರ್ಥವು ಮೂರ್ಛಿತಳಾದ ಸೀತೆಯನ್ನು ಕಂಡ ಬಳಿಕವೂ ದೃಢವಾಗಿರುವುದು ಇದರಿಂದ ತಿಳಿಯುತ್ತದೆ. ಬಳಿಕ ಸೀತೆಯು ಎಚ್ಚೆತ್ತು ಚಂದ್ರನಖಿಯನ್ನು ಕಂಡು ಹಿಂದಿನದೆಲ್ಲ ನೆನಪಾಗಿ ಹೆದರಿ ನೆಲಕ್ಕೆ ಬೀಳುತ್ತಾಳೆ. ಸೀತೆಯನ್ನು ಎತ್ತಿ ಮಲಗಿಸುತ್ತಾರೆ. ಆಗ ಚಂದ್ರನಖಿಯು ನಿಮ್ಮ ಮಾನಕ್ಕೆ ಏನೂ ಕುಂದಾಗದಂತೆ ನೋಡಿಕೊಳ್ಳುತ್ತೇನೆಂದು ಹೇಳುತ್ತಾಳೆ. ಇಲ್ಲಿ ಚಂದ್ರನಖಿಯ ಮಾತಿನಲ್ಲಿ ಪರಿವರ್ತನೆ ಕಂಡು ಬರುತ್ತದೆ. ಆದರೆ ಚಂದ್ರನಖಿಯ ಸ್ವಾರ್ಥ ಯಾವ ಕಾರಣದಿಂದ ಬದಲಾಯಿತೆಂದು ಕಾವ್ಯದಲ್ಲಿ ಚಿತ್ರಿಸಿಲ್ಲ.

'ವಾಲ್ಮೀಕಿ ರಾಮಾಯಣ' ಮತ್ತು 'ಶ್ರೀ ರಾಮಾಯಣ ದರ್ಶನಂ' ಕಾವ್ಯಗಳಿಗಿಂತ ಮಂದಾರ ರಾಮಾಯಣ ದ ಸೂರ್ಪನಖಿಯು ಕೆಲವು ವಿಚಾರಗಳಲ್ಲಿ ಭಿನ್ನವಾಗಿ ಕಾಣುವ ಪಾತ್ರ. ಇಲ್ಲಿ ತುಳು ಭಾಷೆಗೆ ಅನುಗುಣವಾಗಿ ಹೆಸರನ್ನು ಸೂರ್ಪನಖಿ ಎಂದು ಬಳಸಿದ್ದಾರೆ. ಸೂರ್ಪನಖಿಯ ಗಂಡ ಇದ್ಯುಜಿಮ್ಮ. ಅವನು ತನಗೆ ತಲೆಬಾಗುವವನಲ್ಲವೆಂದು ರಾವಣನು ಯುದ್ಧದ ಸಂದರ್ಭದಲ್ಲಿ ಅವನನ್ನು ಕೊಲ್ಲುತ್ತಾನೆ. ಇಲ್ಲಿ ಸೂರ್ಪನಖಿಯ ಎದುರು ದುಃಖದ ನಟನೆ ಮಾಡಿ ಅವಳನ್ನು ಖರ ದೂಷಣರಿರುವ ದಂಡಕ ಮಲೆಗೆ ಬೇಸರ ಕಳೆಯಲು ಕಳುಹಿಸುತ್ತಾನೆ. ಈ ವಿಚಾರ 'ಶ್ರೀ ರಾಮಾಯಣ ದರ್ಶನಂ' ಕಾವ್ಯದಲ್ಲಿ ಇಲ್ಲ. ಮಂದಾರ ರಾಮಾಯಣ ದಲ್ಲಿ ರಾವಣನ ಸ್ವಾರ್ಥ, ದುಷ್ಟತನ ವ್ಯಕ್ತವಾಗಿದೆ. ಖರ, ದೂಷಣರು ಸತ್ತ ಸಂದರ್ಭದಲ್ಲಿ.

"ಗಡಿ ನಿಲ್ಕೆ ರಾಪಿನ ಕಲೆಂಜಿಲೆನ್ ರಡ್ಡ್‌ಕ
ಯ್ಯಾಕೊಂದು ತೆಲಿಪಿ ಬಾಲೆಲೆ ತರ್ಲೆ ಕಲ್ಪಾವೆ
ಪೋದ್ಯಡೇಂ ದಾ ಸೂರ್ಪನಕಿ ಬೀಸಪೋಯಾಳಂಚಿ"
(ಮಂದಾರ ರಾಮಾಯಣ ಪುಟ 136, ಸಾಲು 304-307)
(ಗಾಯವನು ತುಂಬಿ ಹಾರುವ ನೊಣಗಳನ್ನೆರಡು
ಕೈಗಳಿಂದೋಡಿಸುತ್ತ, ನಗಾಡಿ, ಮಕ್ಕಳೆನ
ಗಾಡಿ ಕಲಿಸುವೆ ಹೆದರ ಬೇಡಿಯೆಂದಾ ಶೂರ್ಪ
ನಖಿ ಬೇಗ ಬೇಗ ಹೋದಳು ಅತ್ತಲತ್ತ)

ಹೀಗೆ ಹೇಳಿ ಹೋದಳೆಂದು ಚಿತ್ರಿಸಿದ್ದಾರೆ, ಸೂರ್ಪನಖಿಯು ಲಂಕೆಗೆ ಹೋಗಿ ರಾವಣನಲ್ಲಿ ದೂರುನೀಡುವ ಸನ್ನಿವೇಶ ಕಾವ್ಯದಲ್ಲಿ ಇಲ್ಲ. ರಾವಣನು ಸೀತಾಪಹರಣಕ್ಕೆ ಬಂದಾಗ ಅವನಲ್ಲಿ ಜಿಂಕೆ ಮರಿ ಇತ್ತು. ಜಿಂಕೆಗೆ ರಾಮನ ಬಾಣತಾಗಿದಾಗ ಅದು

ಸೂರ್ಪನಖಿಯಾಗಿ ಮರಣ ಹೊಂದುತ್ತದೆ. ಸೂರ್ಪನಖಿಯು ಜಿಂಕೆಯ ಮರಿಯಾಗುವ ಸನ್ನಿವೇಶವೂ ಕಾವ್ಯದಲ್ಲಿ ಇಲ್ಲ. ಸೂರ್ಪನಖಿಯು ಲಕ್ಷ್ಮಣನಲ್ಲಿ ಮಾತ್ರ ಪ್ರೇಮ ಭಿಕ್ಷೆ ಕೇಳುತ್ತಾಳೆ. ಅವಳ ವಿರಹದ ಉರಿಯ ಚಿತ್ರಣ ಕಾವ್ಯದಲ್ಲಿದೆ. ಲಕ್ಷ್ಮಣನು ಸೂರ್ಪನಖಿಯ ಕಿವಿ ಮೂಗುಗಳನ್ನು ಕೊಯ್ಯುತ್ತಾನೆ. ಖರ, ದೂಷಣರು ರಾಮ ಲಕ್ಷ್ಮಣ ರಿರುವಲ್ಲಿಗೆ ಬಂದು ಸೂರ್ಪನಖಿಯನ್ನು ಯಾರಾದರೊಬ್ಬರು ಮದುವೆಯಾಗಿ ಅಥವಾ ಕಿವಿ ಮೂಗು ಬರುವ ಹಾಗೆ ಮಾಡಿರೆಂದು ಹೇಳುತ್ತಾರೆ. ರಾವಣನು ಇದ್ಯುಜಿಮ್ಮನನ್ನು ಕೊಂದ ಬಳಿಕ ಸೂರ್ಪನಖಿಯನ್ನು ಸಮಾಧಾನ ಮಾಡುತ್ತಾ ಹೀಗೆ ಹೇಳುತ್ತಾನೆ.

"ನಿಕ್ಕ್ ಬೋಡಿತ್ತಿನೊಂಜಾಣುಳ್ಳೆ
ಡೆನಡ ಪಣ್ ಮಗ ನಿಕ್ ಮದಿಮೆನಾ ಅತ್ತ್‌ಕ
ಯ್ಯುತ್ತಾವುನನ ವೊವ್ವೆನಾಂಡ ಲೊಂಜೆನ್ ಮಳ್ತ್
ಬುಡ್ವೆ"
(ಮಂದಾರ ರಾಮಾಯಣ ಪುಟ 128, ಸಾಲು 41-45)
(ನಿನಗೆ ಬೇಕಿದ್ದೊಬ್ಬ ಹುಡಗನಿರ
ಲೆನ್ನಲ್ಲುಸುರು ಮಗಳೆ, ನಿನಗೆ ಮದುವೆಯೊ ಅಲ್ಲ
ದಿರೆ ಕೆಯ್ಯ ಹಿಡಿಸುವುದೊ ಆವುದಾದರುವೊಂದ
ಮಾಡಿ ಬಿಡುವೆನು)

ಗಂಡ ಸತ್ತ ಅಥವಾ ಗಂಡ ಬಿಟ್ಟ ಹೆಣ್ಣಿಗೆ ಪುನಃ ಮದುವೆ ನಡೆಸುವ ಆಚರಣೆಯನ್ನು ಕೈಪತ್ತಾವುನಿ ಎನ್ನುತ್ತಾರೆ. ಹೀಗೆ ತುಳುನಾಡಿನ ಮದುವೆಯ ಸಂಸ್ಕೃತಿಯನ್ನು ಚಿತ್ರಿಸಿದ್ದಾರೆ. ಇದ್ಯುಜಿಮ್ಮನ ವಿಚಾರದ ಸಂದರ್ಭದಲ್ಲಿ ಭೂತಾರಾಧನೆಯ ಚಿತ್ರಣ ಕಂಡುಬರುತ್ತದೆ.

'ಶ್ರೀ ರಾಮಾಯಣ ದರ್ಶನಂ' ಕಾವ್ಯದಲ್ಲಿ ಕುಂಭಕರ್ಣ, ಇಂದ್ರಜಿತು, ಧ್ಯಾನಮಾಲಿನಿ ಮೊದಲಾದವರ ಮರಣದ ಬಳಿಕ ಚಂದ್ರನಖಿಯು ಬಂದು ಹೀಗೆ ನುಡಿಯುತ್ತಾಳೆ. ಪಾಪಿಯಾದ ನಾನು ಪ್ರಾಯಶ್ಚಿತ್ತಕ್ಕಾಗಿ ಬಂದಿದ್ದೇನೆ, ಆಗ ರಾವಣನು ಪಾಪವೇನು? ಯಾರಿಗೆ ಪಶ್ಚಾತ್ತಾಪ, ಯಾರಿಗೆ ಪ್ರಾಯಶ್ಚಿತ್ತ ಎಂದು ಕೇಳಿದನು. ಆಗ ಚಂದ್ರನಖಿಯು ಪಾಪಿ ನಾನು, ನನಗೆ ಪ್ರಾಯಶ್ಚಿತ್ತ ಇನ್ನು ಯಾರಿಗೆ ಎಂದಾಗ ರಾವಣನು ನಗಾಡುತ್ತಾನೆ. ಚಂದ್ರನಖಿಯು ಆಗ ಅಣ್ಣಾಯಾಕೆ ನಗುತ್ತಿ ನಾನು ಮೊದಲಿನವಳಲ್ಲ, ನನ್ನ ಕಾರಣದಿಂದ ನೀನು ಸೀತೆಯನ್ನು ಕದ್ದು ಲಂಕೆಗೆ ತಂದೆ. ನಾನೇ ನಿನ್ನ ದುರ್ಗತಿಗೆ ಕಾರಣ, ಎಷ್ಟೋ ವೀರರು ನನ್ನಿಂದಾಗಿ ಸತ್ತರು. ಕುಂಭಕರ್ಣ, ಅತಿಕಾಯ, ಇಂದ್ರಜಿತು ಮೊದಲಾದವರ ಆಹುತಿಗೆ ನಾನೇ ಕಾರಣ, ಈ ಯುದ್ಧವನ್ನು ನಿಲ್ಲಿಸು ಎನ್ನುತ್ತಾಳೆ. ಹೀಗೆ ಚಂದ್ರನಖಿಯು ಮುಂದೆ ನಡೆಯುವ ದುರಂತವನ್ನು ತಪ್ಪಿಸುವ ಪ್ರಯತ್ನ ನಡೆಸುತ್ತಾಳೆ. ಮುಂದೆ ರಾವಣನು ಯುದ್ಧಕ್ಕೆ ಹೋಗಿ ಮರಣ ಹೊಂದುತ್ತಾನೆ. ರಾವಣನ ಮರಣದ ಸಂದರ್ಭದಲ್ಲಿ ಚಂದ್ರನಖಿಯ ಪಾತ್ರ ಚಿತ್ರಣ ಕಂಡುಬರುವುದಿಲ್ಲ.

'ವಾಲ್ಮೀಕಿ ರಾಮಾಯಣ'ದ ಶೂರ್ಪನಖಿಯು 'ಶ್ರೀ ರಾಮಾಯಣ ದರ್ಶನಂ' ಕಾವ್ಯದಲ್ಲಿ ಚಂದ್ರನಖಿಯಾಗಿಯೂ ಮಂದಾರ ರಾಮಾಯಣ ದಲ್ಲಿ ಸೂರ್ಪನಖಿಯಾಗಿಯೂ ಕಂಡುಬರುವುದು ಮಹತ್ವದ ವಿಚಾರ. ಪಾಪಿಯು ಉದ್ಧಾರವಾಗುವ ಹಿನ್ನೆಲೆಯಿಂದ ಚಂದ್ರನಖಿಯ ಪಾತ್ರ ಕಂಡುಬರುತ್ತದೆ. ತುಳುನಾಡಿನ ಸಂಸ್ಕೃತಿಯ ಹಿನ್ನೆಲೆಯಲ್ಲಿ ಸೂರ್ಪನಖಿಯ ಪಾತ್ರ ಚಿತ್ರಿಸಲಾಗಿದೆ. ಇದು ಗಮನಿಸ ಬೇಕಾದ ವಿಷಯವಾಗಿದೆ.

**ಗ್ರಂಥ ಋಣ :**

1. ಶ್ರೀ ರಾಮಾಯಣ ದರ್ಶನಂ - ಕುವೆಂಪು

2. ಮಂದಾರ ರಾಮಾಯಣ – ಮಂದಾರ ಕೇಶವ ಭಟ್ಟ
3. ಆದಿ ಕವಿ ವಾಲ್ಮೀಕಿ - ಮಾಸ್ತಿ ವೆಂಕಟೇಶ ಅಯ್ಯಂಗಾರ್
4. ಶ್ರೀಮದ್ವಾಲ್ಮೀಕಿ ರಾಮಾಯಣಮ್ – ಎನ್. ರಂಗನಾಥ ಶರ್ಮ